# ಸೈಫ್ ಅರಮನೆ ಮಾರಿಲ್ಲ

ಕೊರೊನಾ ಕಾರಣಕ್ಕಾಗಿ ಹುಟ್ಟೂರು ಹರಿಯಾಣದ ಪಟೌಡಿಗೆ ತೆರಳಿದ್ದ ಸೈಫ್ ಅಲಿ ಖಾನ್ ಮತ್ತು ಕರೀನಾ ಕಪೂರ್ ಅಲ್ಲಿ ಒಂದು ತಿಂಗಳ ವಾಸದ ಬಳಿಕ ಮುಂಬೈಗೆ ಮರಳಿದ್ದಾರೆ. ಎಂದಿನಂತೆ ಛಾಯಾಗ್ರಾಹಕರು ವಿಮಾನ ನಿಲ್ದಾಣದಲ್ಲಿ ಖಾನ್ ದಂಪತಿಯ ಮಗ ತೈಮೂರನ ಫೋಟೊ ತೆಗೆಯಲು ಮುಗಿಬಿದ್ದಿದ್ದಾರೆ.

ಸೈಫ್ ಅಲಿ ಖಾನ್ ಮುಂಬೈಗೆ ಮರಳುವುದರೊಳಗೆ ಇಲ್ಲೊಂದು ದೊಡ್ಡ ಸುದ್ದಿಯಾಗಿತ್ತು. ಪಟೌಡಿಯಲ್ಲಿರುವ ತಮ್ಮ ಹಿರಿಯರ ಅರಮನೆಯನ್ನು ಸೈಫ್ 800 ಕೋಟಿ ರೂಪಾಯಿ ಕೊಟ್ಟು ಮರಳಿ ಖರೀದಿಸಿದ್ದಾನೆ ಎನ್ನುವುದೇ ಆ ಸುದ್ದಿ. ‘ಆ ಅರಮನೆ ನನ್ನ ಸ್ವಾಧೀನದಲ್ಲೇ ಇದೆ. ಹಾಗಾಗಿ ಅದನ್ನು ಮರಳಿ ಖರೀದಿಸುವುದು ಹೇಗೆ?’ ಎಂದು ಸೈಫ್ ಸುದ್ದಿಯನ್ನು ನಿರಾಕರಿಸಿದ್ದಾನೆ.

ಸೈಫ್ ತಂದೆ ಮನ್ಸೂರ್ ಅಲಿ ಖಾನ್ ಪಟೌಡಿ ಈ ಅರಮನೆಯನ್ನು 800 ಕೋಟಿ ರೂಪಾಯಿಗೆ ಹೋಟೆಲ್ ಉದ್ಯಮವೊಂದಕ್ಕೆ ಲೀಸ್ ಮೇಲೆ ನೀಡಿದ್ದಾರಂತೆ. ಆ ಹೋಟೆಲ್ ಚೆನ್ನಾಗಿ ನಡೆಯುತ್ತಿದೆ ಎಂದಿದ್ದಾರೆ ಸೈಫ್. ‘ಪಟೌಡಿಯಲ್ಲಿ ತಾಯಿ ಶರ್ಮಿಳಾ ಠಾಗೋರ್ ಮತ್ತು ಕುಟುಂಬದ ಸದಸ್ಯರ ಜೊತೆಗೆ ಒಂದು ತಿಂಗಳು ಇದ್ದುಬರುವುದಕ್ಕೆ ಹೋಗಿದ್ದೆ. ತಿಂದುಂಡು ತಿರುಗಾಡಿಕೊಂಡು ಸುಖವಾಗಿದ್ದೆ. ಈ ಮಧ್ಯೆ ಉತ್ಪ್ರೇಕ್ಷೆಯ ಸುದ್ದಿ ಹಬ್ಬಿದ್ದು ಹೇಗೋ ಗೊತ್ತಾಗಲಿಲ್ಲ’ ಎಂದು ಸೈಫ್ ಹೇಳಿದ್ದಾರೆ.

ಪಟೌಡಿ ಅರಮನೆಯನ್ನು ಸೈಫ್ ಅಜ್ಜ ತನ್ನ ಪತ್ನಿಗಾಗಿ 100 ವರ್ಷಗಳ ಹಿಂದೆ ಕಟ್ಟಿಸಿದ್ದಂತೆ. ಆಗ ಅಜ್ಜ ಅಲ್ಲಿ ರಾಜ. ‘ಅದಕ್ಕೂ ನೂರು ವರ್ಷ ಹಿಂದಿನಿಂದಲೂ ಅಲ್ಲಿ ಹಿರಿಯರ ದೊಡ್ಡ ಜಮೀನಿದೆ. ನೀಮ್ರಾನಾ ಗ್ರೂಪ್ ಆಫ್ ಹೋಟೆಲ್ಸ್‌ಗೆ ಅಪ್ಪ ಈ ಅರಮನೆಯನ್ನು ಲೀಸ್‌ಗೆ ನೀಡಿದ್ದಾರೆ. ಅಲ್ಲೇ ನನ್ನ ತಾಯಿಯವರದ್ದೊಂದು ಕುಟೀರವಿದೆ. ಈ ಆಸ್ತಿಗೆ ಯಾರೂ ಬೆಲೆ ಕಟ್ಟಲಾಗದು. ಅದು ನನ್ನ ಹೃದಯಕ್ಕೆ ಅತ್ಯಂತ ಹತ್ತಿರದ್ದು’ ಎಂದು ಸೈಫ್ ಭಾವುಕರಾಗಿದ್ದಾರೆ.





# ಕತ್ರೀನಾ: ಬ್ಯೂಟಿ ಬಿಸಿನೆಸ್!

ಬಾಲಿವುಡ್‌ನಲ್ಲಿ ತಾರಾಪಟ್ಟ ಹೊಂದಿದ ಹೀರೋಗಳು ಸಿನಿಮಾದ ಹೊರತಾಗಿ ತಮ್ಮದೇ ಆದ ಉದ್ಯಮಗಳನ್ನು ಕಟ್ಟಿಕೊಳ್ಳುವುದು ಹೊಸತೇನಲ್ಲ. ಶಾರೂಕ್, ಸುನಿಲ್ ಶೆಟ್ಟಿ, ಸಲ್ಮಾನ್ ಮುಂತಾಗಿ ಹಲವರ ಉದಾಹರಣೆಗಳನ್ನು ಕೊಡಬಹುದು. ಹೋಟೆಲ್ ಉದ್ಯಮ, ಬ್ರಾಂಡೆಡ್ ಬಟ್ಟೆಗಳು ಮುಂತಾಗಿ ಹಲವು ಹೀರೋಗಳು ತಮ್ಮದೇ ಆದ ಉದ್ಯಮ ನಡೆಸಿ ಯಶಸ್ಸನ್ನೂ ಕಂಡಿದ್ದಾರೆ. ಆದರೆ ಹೀರೋಯಿನ್‌ಗಳಲ್ಲಿ ಅಂತಹ ಮಹತ್ವಾಕಾಂಕ್ಷೆ ಇರುವವರು ಕಡಿಮೆಯೇ. ಕತ್ರೀನಾ ಕೈಫ್ ಮಾತ್ರ ಇದಕ್ಕೆ ಅಪವಾದ.

‘ಕೇ ಬ್ಯೂಟಿ’ ಎನ್ನುವುದು ಕತ್ರೀನಾ ಸ್ಥಾಪಿಸಿರುವ ಬ್ಯೂಟಿ ಬ್ರ್ಯಾಂಡ್‌ಗಳ ಉದ್ಯಮ. ಈ ಉದ್ಯಮಕ್ಕೀಗ ಮೊದಲ ವಾರ್ಷಿಕೋತ್ಸವದ ಸಂಭ್ರಮ. ತನ್ನದೇ ಆದ ವಿಶೇಷ ಮೇಕಪ್ ಲೈನ್‌ಗಳನ್ನು ಕತ್ರೀನಾ ಆರಂಭಿಸಿದಾಗ ಹುಬ್ಬೇರಿಸಿದವರು ಹಲವರು. ಆದರೆ ಕತ್ರೀನಾಳ ಉದ್ಯಮ ಯಶಸ್ವಿಯಾಗಿ ನಡೆಯಿತು. ಈ ವರ್ಷದ ಫೆಬ್ರುವರಿಯಲ್ಲಿ ನೈಕಾ ಫೆಮಿನಾ ಬ್ಯೂಟಿ ಅವಾರ್ಡ್ಸ್ ಪ್ರಶಸ್ತಿಯೂ ಕತ್ರೀನಾಳ ಕೇ ಬ್ಯೂಟಿಗೆ ಸಿಕ್ಕಿದೆ. ತನ್ನದೇ ಆದ ಸ್ವಂತ ಮೇಕಪ್ ಉತ್ಪನ್ನಗಳ ಕಂಪನಿ ಹೊಂದಿರುವ ಬಾಲಿವುಡ್ ಏಕೈಕ ತಾರೆ ಕತ್ರೀನಾ.

ಕತ್ರೀನಾ ಸ್ವಂತ ಉದ್ಯಮ ಆರಂಭಿಸಿದಾಗ ಅಮಿತಾಭ್, ಶಾರೂಕ್, ಅಮೀರ್, ಪ್ರಿಯಾಂಕಾ, ಸಲ್ಮಾನ್, ಹೃತಿಕ್ ಮುಂತಾಗಿ ಬಹುತೇಕ ತಾರೆಯರು ಕಂಗ್ರಾಟ್ಸ್ ಹೇಳಿ ಹುರಿದುಂಬಿಸಿದ್ದರು. ಐಬ್ರೋ ಪೆನ್ಸಿಲ್, ಲಿಪ್‌ಲೈನರ್, ಲಿಪ್ ಕ್ರೆಯಾನ್, ಲಿಪ್ ಟಾಪರ್, ಲಿಪ್‌ಸ್ಟಿಕ್ ಮತ್ತು ಬಟ್ಟೆಬರೆಗಳನ್ನು ಕೇ ಬ್ಯೂಟಿ ಸಂಸ್ಥೆ ಮಾರುಕಟ್ಟೆಗೆ ತಂದಿದ್ದು ಅವುಗಳಿಗೆ ಭರ್ಜರಿ ಬೇಡಿಕೆ ಇದೆ. ಗುಣಮಟ್ಟವನ್ನು ಕಾಪಾಡಿಕೊಂಡು ಕೈಗೆಟುಕುವ ದರಗಳನ್ನು ಇಟ್ಟಿರುವುದೇ ಕತ್ರೀನಾ ಯಶಸ್ಸಿಗೆ ಕಾರಣ ಎನ್ನುವುದು ಮಾರುಕಟ್ಟೆ ತಜ್ಞರ ಅಭಿಪ್ರಾಯ. ತನ್ನ ಉತ್ಪನ್ನಗಳ ಪ್ರಚಾರಕ್ಕೆ ಕತ್ರೀನಾ ತಾನೆ ಮಾಡೆಲ್ ಆಗಿರುವುದಲ್ಲದೆ ಬ್ಯಾಡ್ಮಿಂಟನ್ ತಾರೆ ಸೈನಾ ನೆಹ್ವಾಲ್, ದಕ್ಷಿಣ ಭಾರತದ ಜನಪ್ರಿಯ ಚಿತ್ರನಟಿ ನಯನತಾರಾ, ರ್‍ಯಾಪರ್ ರಾಜ ಕುಮಾರಿ ಅವರನ್ನೂ ಬಳಸಿಕೊಂಡಿರುವುದು ಆಕೆಯ ವ್ಯವಹಾರ ಚತುರತೆಗೆ ಸಾಕ್ಷಿ.

■ ಬಿಂದು